**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ. ನಂ.235/2014.**

ಪಿ.ಡಬ್ಲ್ಯೂ: 14
ಸಿ.ಡಬ್ಲ್ಯೂ: 17

| | |
|---|---|
| ಹೆಸರು | : ಬಿ.ಹೆಚ್.ಚಂದ್ರಶೇಖರ್ |
| ತಂದೆಯ ಹೆಸರು | : ಲೇಟ್ ಹರಿರಾಮಪ್ಪ |
| ವಯಸ್ಸು | : 62 ವರ್ಷ |
| ಉದ್ಯೋಗ | : ನಿವೃತ್ತ ಎ.ಎಸ್.ಐ. |
| ವಾಸಸ್ಥಳ | : ಹಳೇ ನಗರ, ಭದ್ರಾವತಿ |

**ದಿನಾಂಕ: 22-12-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

2011 ರಿಂದ ದಿ:31-03-2015 ರವರೆಗೆ ನಾನು ಲಕ್ಕವಳ್ಳಿಯ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:31-08-2013 ರಂದು ನಮ್ಮ ಠಾಣಾ ಪಿ.ಎಸ್.ಐ. ಆದ ಚಾಸಾ-16 ರವರಿಗೆ ವರ್ಗಾವಣೆ ಆಗಿದ್ದು ದಿ:03-09-2013 ರಂದು ಸದರಿ ಪಿ.ಎಸ್.ಐ. ರವರು ನನಗೆ ಠಾಣಾ ಪ್ರಭಾರದ ಜೊತೆಗೆ ಈ ಪ್ರಕರಣದ ತನಿಖೆಯನ್ನು ವಹಿಸಿದ್ದು ನಾನು ತನಿಖೆಯನ್ನು ಮುಂದುವರೆಸಿ ಅದೇ ದಿನ ಪಿರ್ಯಾದುದಾರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ದೂರವಾಣಿ ಮೂಲಕ ತಿಳಿಸಿರುತ್ತೇನೆ. ದಿ:06-09-2013 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 09 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಾನು ಸದರಿ ದಾಖಾಲತಿಗಳನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ, ಸಾಕ್ಷಿದಾರರಾದ ಚಾಸಾ-2 ರಿಂದ ಚಾಸಾ-4 ಮತ್ತು ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ, ದಿ:07-09-2013 ರಂದು ನ್ಯಾಯಾಲಯಕ್ಕೆ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯ ವಿರುದ್ಧ ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನಿ.ಪಿ-*2* ಆಡಿಟ್ ರಿಪೋರ್ಟ್ ಅನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ದಿಃ*04-06-2013* ರಂದು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಗೆ ಕ್ಯಾಷ್ ರೆಮಿಟ್ ಮಾಡಿರುವ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*7* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*7*(ಬಿ) ಎಂದು ಗುರುತಿಸಲಾಯಿತು. ದಿಃ*03-06-2013* ರ ಆಡಿಟ್ ರಿಪೋರ್ಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*10* ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*10*(ಎ) ಎಂದು ಗುರುತಿಸಲಾಯಿತು. ದಿಃ*03-06-2013* ರಂದು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಯಲ್ಲಿ ಹಣ ಕಳುವಾದ ಬಗ್ಗೆ ದಾಖಾಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*11* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*11*(ಬಿ) ಎಂದು ಗುರುತಿಸಲಾಯಿತು.

ದಿಃ*22-12-2011* ರಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಗೆ ವರ್ಗಾವಣೆ ಆದ ಬಗ್ಗೆ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*12* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*12*(ಎ) ಎಂದು ಗುರುತಿಸಲಾಯಿತು. ದಿಃ*03-06-2013* ರಂದು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವೀಕೆರೆ ಶಾಖೆಯ ಕ್ಯಾಷಿಯರ್ ಆರೋಪಿಗೆ ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆ ಶಾಖೆಗೆ ರೂ.*15,00,000/-* ಹಣವನ್ನು ರೆಮಿಟ್ ಮಾಡಲು ನೀಡಿದ ಕ್ಯಾಷ್ ರಶೀತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*14* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*14*(ಎ) ಎಂದು ಗುರುತಿಸಲಾಯಿತು.

ಆರೋಪಿ ಹಣವನ್ನು ಕಳುವು ಮಾಡಿದ ಬಗ್ಗೆ ಒಪ್ಪಿಕೊಂಡು ಆರೋಪಿಯ ಮಗ ಸಾಯಿಕೃಷ್ಣ ರೂ.*5,00,000/-* ಹಣವನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ಕಡೂರು ಶಾಖೆಗೆ ರೆಮಿಟ್ ಮಾಡಿದ ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*13* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*13*(ಎ) ಎಂದು ಗುರುತಿಸಲಾಯಿತು. ದಿಃ*06-06-2013* ರಂದು ಚಿಕ್ಕಮಗಳೂರಿನ ಕಾವೇರಿ

ಗ್ರಾಮೀಣ ಬ್ಯಾಂಕ್‌ನ ಕೇಂದ್ರ ವ್ಯವಸ್ಥಾಪಕರಿಗೆ ಕಾವೇರಿ ಗ್ರಾಮೀಣ ಬ್ಯಾಂಕ್, ಕಡೂರು ಶಾಖೆಯ ವ್ಯವಸ್ಥಾಪಕರಾದ ಎನ್.ಜಿ.ಶಣೈ ರವರು ರೂ.*5,00,000/-* ಹಣವನ್ನು ಆರೋಪಿಯ ಮಗ ನೀಡಿದ ಬಗ್ಗೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*15* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*15*(ಎ) ಎಂದು ಗುರುತಿಸಲಾಯಿತು.

ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಯಲ್ಲಿ ದಿಃ*04-06-2013* ರಂದು ಸಚಿನ್‌ಕುಮಾರ್, ಕಛೇರಿ ಸಹಾಯಕ, ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆ ರವರು ಕೇಂದ್ರ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರು ರವರಿಗೆ ದಿಃ*03-06-2013* ರಂದು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಯಲ್ಲಿ ರೂ.*16,00,000/-* ಬಾಕಿ ಇದ್ದು ಸದರಿ ರೂ.*16,00,000/-* ಹಣದಲ್ಲಿ ಆರೋಪಿ ತನಗೆ ರೂ.*15,00,000/-* ಹಣವನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆ ಶಾಖೆಗೆ ರೆಮಿಟ್ ಮಾಡಲು ರೆಡಿ ಮಾಡುವಂತೆ ತಿಳಿಸಿದ್ದು ಆರೋಪಿಯ ನಿರ್ದೇಶನದ ಮೇರೆಗೆ ರೂ.*15,00,000/-* ಹಣವನ್ನು ಮಧ್ಯಾಹ್ನ *01.300* ಗಂಟೆಗೆ ತಾನು ರೆಡಿ ಮಾಡಿರುತ್ತೇನೆ. ಆರೋಪಿ ರೂ.*15,00,000/-* ಹಣಕ್ಕೆ ಡೆಬಿಟ್ ಚಲನ್ ನೀಡಿ ಮಧ್ಯಾಹ್ನ *02.10* ಗಂಟೆಯ ಸಮಯದಲ್ಲಿ ಹಣವನ್ನು ಪಡೆದ ಬಗ್ಗೆ ಸ್ವೀಕೃತಿಯನ್ನು ನೀಡಿರುತ್ತಾರೆ ಎಂದು ಪತ್ರವನ್ನು ನೀಡಿದ್ದು ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-*16* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-*16*(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

***ಪಾಟೀಸವಾಲು : ಆರೋಪಿ ಪರ ವಕೀಲರಿಂದ.***

ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮಗ ನಮ್ಮ ಸಮಕ್ಷಮದಲ್ಲಿ ಯಾವುದೇ ಹಣವನ್ನು ಪಾವತಿಸಿರುವುದಿಲ್ಲ. ಪಿರ್ಯಾದುದಾರರು ತನಿಖೆಯ ಕಾಲದಲ್ಲಿ ಎಷ್ಟು ಹಣವನ್ನು ಆರೋಪಿತನು ಪಾವತಿಸಿದ್ದಾನೆ ಉಳಿಕೆ ಎಷ್ಟು ಹಣವನ್ನು ಪಾವತಿಸಬೇಕು

ಎಂಬ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಾನು ಈ ಪ್ರಕರಣದ ತನಿಖೆಯನ್ನು ಪ್ರಾರಂಭಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸುವವರೆಗೂ ಉಪ-ಪೊಲೀಸ್ ನಿರೀಕ್ಷಕನಾಗಿ (ಎ.ಎಸ್.ಐ.) ಕೆಲಸ ನಿರ್ವಹಿಸುತ್ತಿದ್ದೆನು ಎಂದರೆ ಸರಿ. ನಾನು ಈ ಹುದ್ದೆಯಲ್ಲಿ ಇದ್ದ ಸಮಯದಲ್ಲಿ ಆರೋಪಿತನ ವಿರುದ್ಧ ಹೊರಿಸಿರುವಂತಹ ಆಪಾಧನೆಗಳಂತಹ ಪ್ರಕರಣದಲ್ಲಿ ದೋಷರೋಪಣ ಪಟ್ಟಿಯನ್ನು ಸಲ್ಲಿಸಲು ನನಗೆ ಸಕ್ಷಮ ಅಧಿಕಾರ ಇಲ್ಲದಿರುವ ಕುರಿತು ನನಗೆ ಗೊತ್ತಿರುವುದಿಲ್ಲ. ಆರೋಪಿ ಯಾವುದೇ ತಪ್ಪನ್ನು ಎಸಗದಿದ್ದರೂ ಕೂಡ ಆರೋಪಿಯ ವಿರುದ್ಧ ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

***<u>ಮರುವಿಚಾರಣೆ</u>ಃ ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

ಸಹಿ/-
***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***